# ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 268

**21 ಜೂನ್ 2024 * ಶುಕ್ರವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

## ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

## ದ್ವಂದ್ವ ವಯೊಲಿನ್



ವಿದ್ವಾನ್ ಬಾಂಬೆ ಎ. ಆನಂದ್



ವಿದ್ವಾನ್ ವೇದಜ್ಞ ನರಸಿಂಹ



ವಿದ್ವಾನ್ ಆನೂರು ವಿನೋದ್ ಶ್ಯಾಮ್

ಮೃದಂಗ



ವಿದ್ವಾನ್ ಸುನಾದ್ ಆನೂರ್

ಖಂಜರಿ

ಸರ್ವರಿಗೂ ಹಾರ್ದಿಕ ಸುಸ್ವಾಗತ

**ವಿದ್ವಾನ್ ಬಾಂಬೆ ವಿ. ಆನಂದ್‌ರವರು** ಪ್ರಾರಂಭಿಕ ಶಿಕ್ಷಣವನ್ನು ಶ್ರೀ ಬೋರಿವಿಲಿ ಕಣ್ಣನ್‌ರವರ ಬಳಿ ಪಡೆದರು. ಅನಂತರ ಮುಂಬಯಿಯ ಚೆಂಬೂರಿನಲ್ಲಿರುವ ದ ಫೈನ್ ಆರ್ಟ್ಸ್ ಮ್ಯೂಸಿಕ್ ಸ್ಕೂಲ್‌ನಲ್ಲಿ ವಿದುಷಿ ಗೋಮತಿಯವರ ಬಳಿ ಹಾಗೂ ಶ್ರೀಮತಿ ಟಿ.ಆರ್. ಬಾಲಾಮಣಿಯವರ ಬಳಿ ಶಿಷ್ಯವೃತ್ತಿ ಮಾಡಿದರು. ಪ್ರಸ್ತುತ ಪದ್ಮಶ್ರೀ ಪುರಸ್ಕೃತರಾದ ಸಂಗೀತಕಲಾನಿಧಿ ವಿದುಷಿ ಎ. ಕನ್ಯಾಕುಮಾರಿಯವರ ಬಳಿ ವಾದನನೈಪುಣ್ಯದ ಸೂಕ್ಷ್ಮತೆಗಳನ್ನು ಅಭ್ಯಸಿಸುತ್ತಿದ್ದಾರೆ.

**ವಿದ್ವಾನ್ ವೇದಜ್ಞ ನರಸಿಂಹರವರು** ಸಂಗೀತದ ಪ್ರಾಥಮಿಕ ಶಿಕ್ಷಣವನ್ನು ಏಳನೆಯ ವರ್ಷದಲ್ಲಿ ವಿದುಷಿ ವೈಷ್ಣವಿ ಆನಂದ್‌ರವರಿಂದ ಪಡೆದು, ಅನಂತರ ಪದ್ಮಶ್ರೀ ಪುರಸ್ಕೃತ ಸಂಗೀತಕಲಾನಿಧಿ ವಿದುಷಿ ಎ. ಕನ್ಯಾಕುಮಾರಿಯವರ ಬಳಿ ಉನ್ನತ ಶಿಕ್ಷಣ ಪಡೆದಿದ್ದಾರೆ. ಸಿಂಗಪೂರದ ಪ್ರತಿಷ್ಠಿತ ಸ್ಕೂಲ್ ಆಫ್ ಆರ್ಟ್ಸ್ ಸಂಸ್ಥೆಯಲ್ಲಿ ವಾದನ ತರಬೇತಿಯನ್ನು ಮುಂದುವರಿಸಿರುವರು. ವಯೊಲಿನ್ ವಾದನದಲ್ಲಿ ಎಬಿಆರ್‌ಎಸ್‌ಎಂ ನಾಲ್ಕನೇ ದರ್ಜೆ ಪರೀಕ್ಷೆ ಪಾಸು ಮಾಡಿರುವರು. ಸಿಂಗಪೂರ್ ನ್ಯಾಷನಲ್ ಆರ್ಟ್ಸ್ ಕೌನ್ಸಿಲ್ 2017ರಲ್ಲಿ ನಡೆಸಿದ ವಯೊಲಿನ್ (ಜ್ಯೂನಿಯರ್) ವಾದನದಲ್ಲಿ ಬಹುಮಾನ ಗಳಿಸಿದ್ದಾರೆ. 11ನೆಯ ವಯಸ್ಸಿನಿಂದಲೇ 2019ರಿಂದ ಪಕ್ಕವಾದ್ಯ ಸಹಕಾರದ ಕಾರ್ಯಕ್ರಮಗಳನ್ನು ನೀಡತೊಡಗಿದರು.

**ವಿದ್ವಾನ್ ಆನೂರು ವಿನೋದ್ ಶ್ಯಾಮ್‌ರವರು** ಪ್ರತಿಷ್ಠಿತ ಆನೂರು ಕುಟುಂಬದ ಹಿನ್ನೆಲೆಯಿಂದ ಬಂದವರು. 10ನೆಯ ವಯಸ್ಸಿನಲ್ಲಿ ವಿದ್ವಾನ್ ಆರ್. ಸತ್ಯಕುಮಾರ್‌ರವರ ಬಳಿ ಪ್ರಾರಂಭಿಕ ಶಿಕ್ಷಣ. ಪ್ರಸ್ತುತ ತಂದೆಯವರೂ, ಗುರುಗಳೂ ಆದ ವಿದ್ವಾನ್ ಆನೂರು ಅನಂತಕೃಷ್ಣ ಶರ್ಮರಲ್ಲಿ ಉನ್ನತ ಕಲಿಕೆ. ಬಾಲ್ಯದಿಂದಲೇ ಹಲವಾರು ಪ್ರಶಸ್ತಿ ಗಳಿಸಿರುವರು. 2012ರಲ್ಲಿ ಆಕಾಶವಾಣಿಯ ರಾಷ್ಟ್ರಮಟ್ಟದ ಸಂಗೀತ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದರು.

ಹತ್ತಾರು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರು. ಸದ್ಯ ಆಕಾಶವಾಣಿ ಮತ್ತು ದೂರದರ್ಶನಗಳ "ಎ" ಶ್ರೇಣಿ ಕಲಾವಿದರು. ಶಂಕರ್ ಮಹಾದೇವನ್‌ರವರಂಥ ರಾಷ್ಟ್ರಮಟ್ಟದ ಕಲಾವಿದರಿಂದ ಹಿಡಿದು ಹಲವಾರು ಹಿರಿಯ ವಿದ್ವಾಂಸರಿಗೆ ಮೃದಂಗ ಸಹಕಾರ ನೀಡಿದ ಸಾಧನೆ. ಕರ್ನಾಟಕ–ಹಿಂದೂಸ್ತಾನಿ ಸಂಗೀತ, ಚಲನಚಿತ್ರ ಸಂಗೀತ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆ. ಸಿಂಗಪೂರ, ಜರ್ಮನಿ, ಮೆಕ್ಸಿಕೋ, ಅಬುಧಾಬಿ ಮತ್ತು ಯುರೋಪ್ ದೇಶಗಳಲ್ಲಿ ವಾದನ ಪ್ರಸ್ತುತಿ. ಭಾರತಾದ್ಯಂತ ಹಲವಾರು ಪ್ರತಿಷ್ಠಿತ ಸಂಗೀತಸಭೆಗಳಲ್ಲಿ ಕಾರ್ಯಕ್ರಮ ನೀಡಿಕೆ.

**ವಿದ್ವಾನ್ ಸುನಾದ ಆನೂರ್‌ರವರು** ತಂದೆ ವಿದ್ವಾನ್ ಆನೂರು ದತ್ತಾತ್ರೇಯ ಶರ್ಮ ಮತ್ತು ಚಿಕ್ಕಪ್ಪ ವಿದ್ವಾನ್ ಆನೂರು ಅನಂತಕೃಷ್ಣಶರ್ಮರವರಲ್ಲಿ ವಾದನದ ತರಬೇತಿ ಪಡೆದಿರುವರು. ಆಕಾಶವಾಣಿಯ ರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ 2012ರಲ್ಲಿ ಖಂಜಿರ ವಾದನದಲ್ಲಿ ಪ್ರಥಮ ಬಹುಮಾನ. ಐಟಿಸಿ ಸಂಗೀತ ಸಂಶೋಧನಾ ಅಕ್ಯಾಡೆಮಿ ಪ್ರಶಸ್ತಿ, ಕಲಾವಂತ ಪ್ರಶಸ್ತಿ, ಕೃಷ್ಣ ಗಾನಸಭೆಯ ಟಿ.ಎ. ಹರಿಹರ ಶರ್ಮ ಪ್ರಶಸ್ತಿ, ರಾಮಲಲಿತ ಕಲಾಮಂದಿರದ "ರಾಗಲಯ ಪ್ರಭ" ಪ್ರಶಸ್ತಿಗಳು ದೊರೆತಿವೆ. ಆಕಾಶವಾಣಿಯ "ಎ" ಶ್ರೇಣಿ ಕಲಾವಿದರು. ಜರ್ಮನಿ, ಸಿಂಗಪೂರ ಮತ್ತು ಯೂರೋಪ್ ದೇಶಗಳಲ್ಲಿ ವಾದನ ಪ್ರಸ್ತುತಿ. ಖ್ಯಾತ ಸಂಗೀತ ವಿದ್ವಾಂಸರುಗಳಿಗೆ ಪಕ್ಕವಾದ್ಯ ಸಹಕಾರ.

# ಬೆಳದಿಂಗಳ ಸಂಗೀತ 269

## 21 ಜುಲೈ 2024



**ಗಾಯನ**

**ವಿದುಷಿ ಹರಿಣಿ ರಮೇಶ್**

**ವಯೊಲಿನ್**

**ವಿದ್ವಾನ್ ಕೇಶವ ಮೋಹನ್‌ಕುಮಾರ್**





**ಮೃದಂಗ**

**ವಿದ್ವಾನ್ ಎ. ರಾಧೇಶ್**

**ಘಟಂ**

**ವಿದ್ವಾನ್ ಎಸ್. ಮಂಜುನಾಥ್**



---

ಫೋನ್: 0821–2548221, 2548223 • ಇಮೇಲ್: sutturmath@jssonline.org